ಸಂಕಷ್ಟಗಳನ್ನು ಎದುರಿಸಿ ಬೆಳೆದು ಕೆಲವಾದರೂ ಮರಳಿ ಬರುತ್ತವಲ್ಲ, ಅದು ಅಚ್ಚರಿಯ ಸಂಗತಿ. ಸಂಶೋಧಕರು ಈ ಆಲಿವ್ ರಿಡ್ಲೆಗಳ ಬೆನ್ನಿಗೆ ಟೆಲಿಮೆಟ್ರಿ ಸಾಧನವನ್ನು ಅಂಟಿಸಿ, ಉಪಗ್ರಹಗಳ ಮೂಲಕ ಅವುಗಳ ಪಯಣವನ್ನು ದಾಖಲಿಸಿದ್ದಾರೆ. ನಿಧಾನ ಚಲನೆಗೆ ಹೆಸರಾದ ಈ ಪಾಪದ ಪ್ರಾಣಿಗಳು 9000 ಕಿಲೊಮೀಟರ್‌ವರೆಗಿನ ಸಮುದ್ರವನ್ನು ಸುತ್ತಾಡಿ, ಮತ್ತೆ ಹೊರಟಲ್ಲಿಗೇ ಬಂದಿವೆಯೆಂದು ಒಡಿಶಾ ಕಡಲಂಚಿನಲ್ಲಿ 2018ರಲ್ಲಿ ಅಧ್ಯಯನ ನಡೆಸಿದ ವಿಜ್ಞಾನಿಗಳು ಹೇಳಿದ್ದಾರೆ. ಕಳೆದ ಸೆಪ್ಟಂಬರಿನಲ್ಲಿ ಮಹಾರಾಷ್ಟ್ರದ ರತ್ನಗಿರಿ ಬೀಚ್‌ನಲ್ಲಿ ಐದು ಆಮೆಗಳಿಗೆ ರೇಡಿಯೊ ಟ್ಯಾಗಿಂಗ್ ಮಾಡಿ ಬಿಡಲಾಗಿದೆ.

"ಮತ್ತೆ ಈ ಊರಿಗೆ ಹಿಂದಿರುಗುವುದು ಸಾವಿರಕ್ಕೆ ಒಂದೋ ಎರಡೋ ಅಷ್ಟೆ!" ಎನ್ನುತ್ತಾರೆ ಡಾ. ಮೇಸ್ತ.

## ತುಳಿತದಿಂದ ಬಚಾವಾಗಲು ತುಡಿತ

ಮರಿಗಳಿಗೆ "ಶುಭವಾಗಲಿ, ಬೆಳೆದು ದೊಡ್ಡವರಾಗಿ ಸುರಕ್ಷಿತ ಹಿಂದಿರುಗಿ" ಎಂದು ವಿದಾಯ ಹೇಳಿ ಹಿಂದಿರುಗುವಾಗ "ಸಾರ್, ನಮಗೂ ಗುಡ್‌ಲಕ್ ಹೇಳಿ" ಎನ್ನುತ್ತಾರೆ ರಾಜೇಶ್ ತಾಂಡೇಲ. ಅದೇಕೆಂದು ಕೇಳಿದಾಗ, ಅವರ ಸಮಸ್ಯೆಗಳ ಕಥನಗಳು ಒಂದೊಂದಾಗಿ ಬಿಚ್ಚಿಕೊಳ್ಳುತ್ತವೆ. ಹೊನ್ನಾವರದ ಬಂದರಿನ ಆಧುನೀಕರಣವಾಗುವುದು ಅವರಾರಿಗೂ ಇಷ್ಟ ಇಲ್ಲ. ಬಡ ಮೀನುಗಾರರನ್ನು ಗುತ್ತಿಗೆದಾರರು ಒಕ್ಕಲೆಬ್ಬಿಸುತ್ತಾರೆ. ಪರಿಹಾರ, ಪುನರ್ವಸತಿ ಯಾರಿಗೂ ಸಿಗುವುದಿಲ್ಲ. ಏಕೆಂದರೆ, ಅವರು ನಿಂತಿರುವ ಊರಿಗೆ ದಾಖಲೆಯೇ ಇಲ್ಲ. ಏಕೆಂದರೆ ಅದು ಶರಾವತಿ ಮುಖಜಭೂಮಿ ಆಗಿರುವುದರಿಂದ ಅದರ ಸ್ವರೂಪವೇ ಆಗಾಗ ಬದಲಾಗುತ್ತಿರುತ್ತದೆ. ಪಾವಿನಕೂರ್ವೆ ಎಂಬ ಊರೇ ಕಣ್ಮರೆಯಾಗಿದೆ. ಅದೇ ಜಾಗದಲ್ಲಿ ಈಗ ಹೊಸ ಮರಳುದಿಬ್ಬವೊಂದು ಸೃಷ್ಟಿಯಾಗಿ ಅದು ಮುಲ್ಲುಕೂರ್ವೆಯಾಗಿದೆ. ಹಿಂದಿನ ಕಾಲದ ಕೃಷಿಕರು ಬಿಟ್ಟು ಹೋದ ಆ ಮರಳು ದಿಬ್ಬದ ಮೇಲೆ ಈಗಿನ ಟೊಂಕಾ ಊರು ನಿಂತಿದೆ. ಇಲ್ಲಿನ ಬಹುಪಾಲು ಕುಟುಂಬಗಳಿಗೆ (ಹೆಚ್ಚಿನದಾಗಿ ಮಹಿಳೆಯರಿಗೆ) ಹಸಿಮೀನನ್ನು ಬಿಸಿಲಲ್ಲಿ ಒಣಗಿಸಿ ಮಾರುವುದೇ ವೃತ್ತಿಯಾಗಿದೆ. ಆ ನೆಲದ ಮೇಲೆ ಡಾಂಬರಿನ ಕಂಬಳಿ ಹಾಸಿದಂತೆ ಹೊಸ ಚತುಷ್ಪಥ ರಸ್ತೆ ಬರಲಿದೆ. ಮೀನು ಒಣಗಿಸಲು ಜಾಗವೂ ಇರುವುದಿಲ್ಲ. ಅಷ್ಟಿಷ್ಟು ಜಾಗ ಉಳಿದರೂ ರಸ್ತೆಯ ದೂಳು, ಕೆಮ್ಮಣ್ಣು, ಹೊಗೆಮಸಿಯಲ್ಲಿ ಮೀನುಗಳನ್ನು ಒಣಗಿಸುವಂತಿಲ್ಲ.

''ಹೊಸ ಬಂದರೂ ಬೇಡ, ಹೆದ್ದಾರಿಯೂ ಬೇಡ'' ಎಂದು ಟೊಂಕಾ ಊರಿನ 715 ಕುಟುಂಬಗಳ ಎರಡೂವರೆ ಸಾವಿರ ಜನರು ಪ್ರತಿಭಟನೆಗೆ ಟೊಂಕ ಕಟ್ಟಿದ್ದಾರೆ. ಅನೇಕ ಬಾರಿ ರಸ್ತೆ ತಡೆ, ಜೆಸಿಬಿ ರೋಕೋ ಮುಂತಾದ ಹೋರಾಟಗಳಲ್ಲಿ ಮೀನುಗಾರ್ತಿಯರೂ ಭಾಗವಹಿಸಿದ್ದಾರೆ. ಪೊಲೀಸ್ ಕಾರ್ಯಾಚರಣೆ ಕೂಡ ನಡೆದಿದೆ. ಸಾಲುಸಾಲು ಎಫ್‌ಐಆರ್‌ಗಳು ದಾಖಲಾಗಿವೆ. "ವೋಟರ್ ಲಿಸ್ಟ್ ತೆಗೆದು ಕಂಡಕಂಡ ಹೆಸರುಗಳ ಮೇಲೆ ಮೊಕದ್ದಮೆ ಹೂಡಲಾಗಿದೆ; ಹತ್ತಾರು ಯುವಕರ ಮೇಲೆ ರೌಡಿ ಶೀಟರ್ ಎಂದು ಕೇಸ್ ಹಾಕಿದಾರೆ" ಎನ್ನುತ್ತಾರೆ ಭಾಸ್ಕರ ತಾಂಡೇಲ.

ಈ ಹಂತದಲ್ಲಿ ಪ್ರಕಾಶ ಮೇಸ್ತ ತಮ್ಮ ಬ್ಯಾಕ್‌ಪ್ಯಾಕ್‌ನಲ್ಲಿರುವ ಸರಕಾರಿ ದಾಖಲೆಗಳ ಕಡತಗಳನ್ನು ಹೊರಕ್ಕೆ ತೆಗೆಯುತ್ತಾರೆ. ಶರಾವತಿ ತೀರದಲ್ಲೇ ಹುಟ್ಟಿ ಬೆಳೆದ ಈ ಯುವಕ ಕಡಲತೀರದ ಅಳಿವೆಗಳ ಜೀವಲೋಕದ ಕುರಿತು ಡಾಕ್ಟರೇಟ್ ಡಿಗ್ರಿ ಪಡೆದಿದ್ದಾರೆ. ಕರ್ನಾಟಕ ಜೀವಿವೈವಿಧ್ಯ ಮಂಡಳಿಯ ಸದಸ್ಯರಾಗಿ, ಕಡಲಾಮೆಗಳ ರಕ್ಷಣೆಗೆ ಮೂರು ವರ್ಷಗಳಿಂದ ಏಗುತ್ತಿದ್ದಾರೆ. ಕಾಸರಕೋಡಿನ ಈ ಭಾಗವನ್ನು "ಜೀವಿವೈವಿಧ್ಯದ ಪಾರಂಪರಿಕ ತಾಣ" ಎಂದು ಸರಕಾರ ಘೋಷಿಸುವಂತೆ ಅದಕ್ಕೆ ಬೇಕಾದ ಮಾಹಿತಿಗಳನ್ನೆಲ್ಲ ಮುಂದಿಡುತ್ತಿದ್ದಾರೆ. ಅವರ ಚೀಲದಲ್ಲಿ ನಕ್ಷೆಗಳಿವೆ, ಸರ್ಕಾರಿ ಸುತ್ತೋಲೆಗಳಿವೆ, ನ್ಯಾಯಾಲಯದ ಆದೇಶಗಳಿವೆ; ಮೀನುಗಾರರ ಮೇಲಾದ ದೌರ್ಜನ್ಯದ ವಿವರಗಳಿವೆ, ಸ್ಥಳೀಯರ ಹೋರಾಟದ ವರದಿಗಳ ಪ್ರತಿಗಳಿವೆ. "ಸರಕಾರದ್ದೇ ನಿಯಮಗಳ ಪ್ರಕಾರ ಈ ಪ್ರದೇಶ ಅತ್ಯಂತ ಎಚ್ಚರಿಕೆಯಿಂದ ಸಂರಕ್ಷಿಸಬೇಕಾದ 'ಸಿಆರ್‌ಝಡ್ 1ಎ' ವರ್ಗದಲ್ಲಿ ಬರುತ್ತದೆ. ಇಲ್ಲಿ ಬಂದರು ಅಭಿವೃದ್ಧಿಯ ಹೆಸರಿನಲ್ಲಿ ಹಸ್ತಕ್ಷೇಪ ಮಾಡುವಂತಿಲ್ಲ. ಸ್ಥಳೀಯರು ಅದನ್ನೇ ಹೇಳುತ್ತಾರೆ. ಆದರೂ ಅವರನ್ನು ಹತ್ತಿಕ್ಕುವ ಯತ್ನ ನಡೆಯುತ್ತಿದೆ" ಎಂದು ಮೇಸ್ತ ವಿವರಿಸುತ್ತಾರೆ.

"ಅದಷ್ಟೇ ಅಲ್ಲ, ಈಚಿನ ವರ್ಷಗಳಲ್ಲಿ ಈ ಅಳಿವೆಯಲ್ಲಿ ಯಾವ ಹೊಸ ಕಾಂಕ್ರೀಟ್ ಕಟ್ಟಡ ನಿರ್ಮಿಸಿದರೂ ಅದು ಧ್ವಂಸವಾಗುತ್ತದೆ; ಏಕೆಂದರೆ ಹವಾಗುಣ ವ್ಯತ್ಯಾಸದಿಂದ ಚಂಡಮಾರುತ ಮತ್ತು ಕಡಲಕೊರೆತವೂ ಶರಾವತಿ ಮುಖದಲ್ಲಿ ಹೆಚ್ಚುತ್ತಿದೆ" ಎನ್ನುತ್ತಾರೆ, ಕಳೆದ ಆರು ವರ್ಷಗಳಿಂದ ಕರ್ನಾಟಕ ಕಡಲತೀರದ ಪರಿಸರ ಅಧ್ಯಯನದಲ್ಲಿ ತೊಡಗಿರುವ ಅಜೀಂ ಪ್ರೇಮ್‌ಜೀ ವಿ.ವಿ.ಯ ಸಂಶೋಧಕ ಮಹಾಬಲೇಶ್ವರ ಸಾಯಿಮನೆ. ಅವರ ಪ್ರಕಾರ, 2019ರಲ್ಲಿ ಬಂದ ಸುಂಟರಗಾಳಿಯಲ್ಲಿ ಹೊಸ ಬಂದರಿಗೆಂದು ನಿರ್ಮಿಸಿದ ಕಾಂಕ್ರೀಟ್ ಜೆಟ್ಟಿಗಳು, ಕಟ್ಟೆಗಳು, ಕಂಬಗಳೆಲ್ಲ ನೀರುಪಾಲಾಗಿವೆ. ಭವಿಷ್ಯದಲ್ಲಿನ ಅದ್ದೂರಿ ನಿರ್ಮಾಣವೂ ಹೆಚ್ಚಿನ ಸಂಕಷ್ಟಕ್ಕೆ ದಾರಿ ಮಾಡಿಕೊಡಲಿದೆ. "ಈಗಿದ್ದಂತೆ ಅಲ್ಲಿನ ಕಡಲತೀರವನ್ನು ಸಹಜಸ್ಥಿತಿಯಲ್ಲಿ ಇಡುವುದೇ ವಿವೇಕದ ಮಾರ್ಗ" ಎನ್ನುತ್ತಾರೆ, ಸಾಯಿಮನೆ.

## ಸೋಜಿಗಗಳ ಆಗರ ಈ ಸಾಗರತೀರ

ಹೊನ್ನಾವರದ ಕಡಲ ತೀರ ತುಂಬ ಸುಂದರ ಮತ್ತು ಸಮೃದ್ಧ, ಅದರಲ್ಲೇನೂ ಸಂಶಯವಿಲ್ಲ.



ಶರಾವತಿ ಮುಖಜ ಪ್ರದೇಶ (ಅಳಿವೆ)